**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 201/2025**

| | |
|---|---|
| ಹೆಸರು | :ಕುಶಾಲಪ್ಪ |
| ತಂದೆಯ ಹೆಸರು | :ಚೆನ್ನಪ್ಪ ಗೌಡ |
| ಪ್ರಾಯ | :58 ವರ್ಷ |
| ಉದ್ಯೋಗ | :ವೈನ್ ಶಾಪ್ ಮಾಲೀಕರು |
| ವಾಸ | :ಮುರುಳ್ಯ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಸುಳ್ಯ ಗಾಂಧಿನಗರದ ಪ್ರಕಾಶ್ ವೈನ್ ಶಾಪ್ ನ ಮಾಲೀಕನಾಗಿರುತ್ತೇನೆ. ಅದಕ್ಕೆ ನವೀನ ಶೆಟ್ಟಿ ಎಂಬುವವರು ಸಹ ಮಾಲೀಕರಾಗಿರುತ್ತಾರೆ. ನಮ್ಮ ವೈನ್ ಶಾಪ್ ನಲ್ಲಿ ನಾನು ಶರೀಫ್ ಮತ್ತು ಲೋಕೇಶ್ ಎಂಬುವವರು ಬೇರೆ ಬೇರೆ ಸಮಯದಲ್ಲಿ ಮದ್ಯ ಮಾರಾಟ ಮಾಡುತ್ತೇವೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಪರಿಚಯ ಇದೆ. ನಮ್ಮ ಅಂಗಡಿಗೆ ಸಾಕಷ್ಟು ಜನ ಮದ್ಯ ಖರೀದಿ ಮಾಡಲು ಬರುತ್ತಾರೆ. ನಾವು ಒಬ್ಬ ವ್ಯಕ್ತಿಗೆ ಸುಮಾರು 2 ½ ಲೀಟರ್ ಎಂದರೆ 90 ಎಂ.ಎಲ್ ನ 24 ಟೆಟ್ರಾ ಪ್ಯಾಕೆಟ್ ಗಳನ್ನು ಮಾರಾಟ ಮಾಡಬಹುದು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿ. 27.11.2024 ರಂದು ಪೊಲೀಸರು ಆರೋಪಿತನನ್ನು ನಮ್ಮ ಅಂಗಡಿ ಬಳಿ ಕರೆದುಕೊಂಡು ಬಂದಿದ್ದು ಆ ಸಮಯಲ್ಲಿ ಆರೋಪಿ ದಿ. 23.11.2024 ರಂದು ಬೆಳಿಗ್ಗೆ 11 ಗಂಟೆಗೆ ನನ್ನಿಂದ ತಲಾ 90 ಎಂ.ಎಲ್ ನ 22 ಮೈಸೂರು ಲ್ಯಾನ್ಸರ್ ಟೆಟ್ರಾ ಪ್ಯಾಕೆಟ್ ಗಳನ್ನು ಖರೀದಿ ಮಾಡಿರುವುದಾಗಿ ಮತ್ತು ಚಾಸಾ–8 ರವರಿಂದ ಅದೇ ದಿನ ಬೆಳಿಗ್ಗೆ 11.30 ಗಂಟೆಗೆ ತಲಾ 90 ಎಂ.ಎಲ್ ನ 22 ಮೈಸೂರು ಲ್ಯಾನ್ಸರ್ ಟೆಟ್ರಾ ಪ್ಯಾಕೆಟ್ ಗಳನ್ನು ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟಾಟ್ರಾ ಪ್ಯಾಕೆಟ್ ಗಳನ್ನು ಆರೋಪಿ ತನ್ನ ಅಂಗಡಿಯಲ್ಲಿ ಇಟ್ಟು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವುದಾಗಿ ನನ್ನ ಮುಂದೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಿಪಿ–19 ರಂತೆ ನಮ್ಮ ವೈನ್ ಶಾಪ್ ನ ಉದ್ದಿಮೆ ಪರವಾನಿಗೆ ಪತ್ರ ಪಡೆದುಕೊಡಿಂರುತ್ತಾರೆ ಎಂದರೆ ಸರಿ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಸಾಕ್ಷಿ ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ–24 ಎಂದು ಗುರುತಿಸಲಾಯಿತು.

ಎಂ.ಓ.1 ರಲ್ಲಿರುವ 44 ವಿಸ್ಕಿ ಪ್ಯಾಕೆಟ್ ಗಳು ಎಂದರೆ ಅದನ್ನು ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಎಂ.ಓ.1 ನಮ್ಮ ಅಂಗಡಿಗೆ ಸೇರಿದ್ದರೂ ಸಹ ಅವುಗಳನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಗೆ ಯಾವ ಸೀರಿಯಲ್ ನಂಬರಿಗೆ ಮದ್ಯದ ಸ್ಯಾಚೆಟ್ ಗಳು ವಿತರಣೆ ಆಗುತ್ತವೆ ಎಂಬ ಬಗ್ಗೆ ಮಳಿಗೆಯ ವ್ಯವಸ್ಥಾಪಕರ ಬಳಿ ಮಾಹಿತಿ ಇರುತ್ತದೆ ಎಂದರೆ ಸರಿ. ಆ ಬಗ್ಗೆ ನಮ್ಮ ಮಳಿಗೆಗೆ ವಿತರಣೆ ಆದ ಬಗ್ಗೆ ನಿಪಿ–15 ರಲ್ಲಿ ನಮೂದು ಇದೆ ಎಂದರೆ

ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ನನ್ನ ವ್ಯವಹಾರದ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ನಾನು ಆರೋಪಿತನಿಗೆ ಸ್ವತಃ ಮಾರಾಟ ಮಾಡಿದ ಬಗ್ಗೆ ನನಗೆ ನೆನಪಿಲ್ಲ ಎಂದರೆ ಸರಿ. ನಿಪಿ–19 ನ್ನು ಪೊಲೀಸರಿಗೆ ನಾನು ತೆಗೆದುಕೊಂಡು ಹೋಗಿ ಕೊಟ್ಟಿರುವುದಿಲ್ಲ. ನಿಪಿ–15 ರಲ್ಲಿ ನಮೂದು ಮಾಡಿರುವ ಮದ್ಯದ ಸ್ಯಾಚೆಟ್ ಗಳು ನಮ್ಮ ಅಂಗಡಿಗೆ ವಿತರಣೆ ಆಗಿರುವ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ. ಆರೋಪಿಗೆ ಮದ್ಯ ಮಾರಾಟ ಮಾಡಿದ ಬಗ್ಗೆ ಪೊಲೀಸರು ನನ್ನಿಂದ ರಶೀದಿ ಪಡೆದುಕೊಂಡಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ